ದಿನಾಂಕ: 04.02.2025

ಅಸಲು ದಾವೆ: 122/2019

ಡಿ.ಡಬ್ಲ್ಯೂ: 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ವಾದಿ ಪರ ವಕೀಲರಿಂದ:

ನಾನು ಬಿ.ಎ. ಓದಿರುತ್ತೇನೆ. ನನ್ನ ತಾಯಿ ಓದಿರುವುದಿಲ್ಲ. ನನ್ನ ಮೃತ ಅಜ್ಜಿ ಯಶೋದಮ್ಮ ಓದಿರುವುದಿಲ್ಲ. ನನ್ನ ತಂದೆ ತಾಯಿಗೆ ನಾನು ಮತ್ತು ನನ್ನ ತಂಗಿ ಇಬ್ಬರು ಮಕ್ಕಳು. ನನ್ನ ತಂಗಿಗೆ 2004 ನೇ ಇಸವಿಯಲ್ಲಿಯೇ ಮದುವೆಯಾಗಿರುತ್ತದೆ. ನಮ್ಮ ಕುಟುಂಬಕ್ಕೆ ಒಂದು ವರೆ ಎಕರೆ ಜಮೀನು ಇರುತ್ತದೆ. ನಾನು ಮದುವೆಯಾಗಿರುತ್ತೇನೆ. ಕುಮಾರ್ ಅವರಿಗೆ ಕ್ರಯದ ಕರಾರುಪತ್ರ ಮಾಡಿಕೊಟ್ಟಿದ್ದೀರಿ ಎಂದರೆ ಸಾಕ್ಷಿ ಇಲ್ಲ ದುಡ್ಡಿನ ಭದ್ರತೆಗಾಗಿ ಮಾಡಿಕೊಟ್ಟಿದ್ದೇವೆ ಎಂದು ಉತ್ತರಿಸುತ್ತಾರೆ. ಕ್ರಯದ ಕರಾರುಪತ್ರದ ಒಕ್ಕಣೆಯನ್ನು ಓದಿ ತಿಳಿದುಕೊಂಡಿರುತ್ತೇನೆ. ಆ ನಂತರ ಸದರಿ ಪತ್ರವನ್ನು ನೊಂದಣಿ ಮಾಡಿಸಿರುವುದು ಎಂದರೆ ಸರಿ. 2014 ರಲ್ಲಿ ರೂ.7 ಲಕ್ಷಕ್ಕೆ ಕ್ರಯದ ಕರಾರು ಪತ್ರ ಮಾಡಿಕೊಟ್ಟಿರುತ್ತೇನೆ. ಆ ಸಮಯದಲ್ಲಿ ಎಷ್ಟು ಐಟಂ ಸ್ವತ್ತುಗಳಿಗೆ ಕರಾರು ಮಾಡಿಕೊಟ್ಟಿದ್ದೀರಿ ಎಂದರೆ ಸಾಕ್ಷಿ ಒಂದೇ ಐಟಂ ಸ್ವತ್ತು ಅದು ಒಂದು ವರೆ ಎಕರೆ ಎಂದು ಉತ್ತರಿಸುತ್ತಾರೆ. ಸದರಿ ಸ್ವತ್ತಿನ ಸರ್ವೆ ನಂ.30. ಆ ಕರಾರಿನ ಸ್ವತ್ತಿನ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ದುರ್ಗಾನಂದ ಅವರ ಜಮೀನು, ಉತ್ತರಕ್ಕೆ ಮುತ್ತೇಗೌಡ ಅವರ ಜಮೀನು, ದಕ್ಷಿಣಕ್ಕೆ ಕೋಚಪ್ಪ ಅವರ ಜಮೀನು ಇರುತ್ತದೆ. ಸಾಲದ ಭಾದ್ರತೆಗಾಗಿ ಕರಾರು ಮಾಡಿಕೊಟ್ಟಿರುವುದಾಗಿ ನೀವು ಹೇಳುವ ಕಾಲಕ್ಕೆ ಯಾರು ಯಾರು ಸಾಕ್ಷಿದಾರರಾಗಿ ಸೇರಿದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. 2014 ರಲ್ಲಿ ಸಾಲದ ಬಾಬ್ತು ಭದ್ರತೆಗಾಗಿ ಮಾಡಿಕೊಟ್ಟಿರುವ ಕರಾರು ಎಂದು ನೀವು ಹೇಳುತ್ತಿರುವುದು ಸುಳ್ಳು, ಆ ಕರಾರನ್ನೂ ಸಹ ಸ್ವತ್ತಿನ ಮಾರಾಟಾದ ಬಾಬ್ತು ಕರಾರು ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. 2014 ರಲ್ಲಿ ನೀವು ಕುಮಾರ್ ಅವರಿಗೆ ಮಾಡಿಕೊಟ್ಟಿರುವ ಕ್ರಯದ ಕರಾರಿನ ಸ್ವತ್ತಿನ ವಿಸ್ತೀರ್ಣ ಒಂದು ಎಕರೆ ಎಂದರೆ ಸಾಕ್ಷಿ ಇಲ್ಲ ಒಂದು ವರೆ ಎಕರೆ ಎಂದು ಉತ್ತರಿಸುತ್ತಾರೆ. 2014 ರ ಕರಾರು ಒಂದು ಎಕರೆಗೆ ಅಲ್ಲ, ಒಂದು ವರೆ ಎಕರೆಗೆ ಎಂದು ತೋರಿಸಲು ದಾಖಲಾತಿಯನ್ನು ಹಾಜರು ಮಾಡಿದ್ದೀರ ಎಂದರೆ ಸಾಕ್ಷಿ ಇಲ್ಲ, ಒಂದು ವರೆ ಎಕರೆ ಆರ್.ಟಿ.ಸಿ ಹಾಜರು ಪಡಿಸಿದ್ದೀನಿ ಎಂದು ಉತ್ತರಿಸುತ್ತಾರೆ. ಸಾಲದ ಭಾದ್ರತೆಗೋಸ್ಕರ

2014 ರ ಕ್ರಯದ ಕರಾರು ಮಾಡಿಕೊಟ್ಟಿದ್ದೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿ ಹಾಜರು ಪಡಿಸಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. 2014 ರಲ್ಲಿ ಕ್ರಯದ ಕರಾರು ಆದ ಸಮಯದಲ್ಲಿ ಸ್ವತ್ತಿನ ದಾಖಲಾತಿಗಳು ಸರಿ ಪಡಿಸಲು ಆಗಲಿಲ್ಲ ಎಂದು, ಅವುಗಳನ್ನು ಸರಿಪಡಿಸಿ ಕ್ರಯ ಪತ್ರ ಮಾಡಿಕೊಡುವುದಾಗಿ ಹೊಸದಾಗಿ ವ್ಯಾಪಾರ ಮಾಡಿ ಒಂದು ಎಕರೆ 10 ಗುಂಟೆಗೆ ದಿನಾಂಕ 04.11.2016 ರಂದು ವಾದಿಯ ಹೆಸರಿಗೆ ಹೊಸದಾಗಿ ಕ್ರಯದ ಕರಾರು ಪತ್ರ ನೊಂದಣಿ ಮಾಡಿ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಆ ಸಮಯದಲ್ಲಿ ರೂ.16 ಲಕ್ಷಗಳಿಗೆ ವ್ಯಾಪಾರ ಮಾಡಿ ಆ ಪೈಕಿ 15 ಲಕ್ಷದ 50 ಸಾವಿರಗಳನ್ನು ಮುಂಗಡವಾಗಿ ಪಡೆದು ಬಾಕಿ ರೂ.50 ಸಾವಿರಗಳನ್ನು ಕ್ರಯ ಪತ್ರದ ನೊಂದಣಿ ವೇಳೆ ಪಡೆದುಕೊಳ್ಳುತ್ತೇವೆ ಎಂದು ಒಪ್ಪಿ ನೀವು, ನಿಮ್ಮ ತಾಯಿ ಮತ್ತು ನಿಮ್ಮ ಮೃತ ಅಜ್ಜಿ ಕರಾರು ಪತ್ರ ನೊಂದಣಿ ಮಾಡಿಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಅದನ್ನು ಅವರೇ ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ಸದರಿ ಪತ್ರವನ್ನು 3 ವರ್ಷಗಳ ಅವಧಿ ನಿಗದಿ ಪಡಿಸಿ ಆ ಅವಧಿಯಲ್ಲಿ ಸ್ವತ್ತಿನ ದಾಖಲಾತಿಗಳನ್ನು ಸರಿಪಡಿಸಿ ಕ್ರಯ ಪತ್ರ ನೊಂದಾಯಿಸಿ ಕೊಡುವುದಾಗಿ ಒಪ್ಪಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಸಮಯ ನೀಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮದ್ದೂರು.